ಮಾಗಡಿ ಕ್ಷೇತ್ರದಲ್ಲಿ ವಿದ್ಯುತ್ ಸಂಪರ್ಕವನ್ನು ಸರಿಪಡಿಸುವ ಬಗ್ಗೆ

ಶ್ರೀ ಎಚ್.ಸಿ. ಬಾಲಕೃಷ್ಣ (ಮಾಗಡಿ) : ಅಧ್ಯಕ್ಷರೇ, ಕಳೆದ ಮೂರ್ನಾಲ್ಕು ದಿವಸಗಳಿಂದ ನನ್ನ ಕ್ಷೇತ್ರದಲ್ಲಿ ವಿದ್ಯುತ್ ಸಂಪೂರ್ಣ ನಿಂತುಹೋಗಿ ಕುಡಿಯುವ ನೀರಿಗೆ ಮತ್ತು ಮಕ್ಕಳಿಗೆ ಓದಲು ಬಹಳ ತೊಂದರೆ ಆಗಿದೆ. ಏಕೆ ಆಗಿದೆ ಮತ್ತು ಅದನ್ನು ಹೇಗೆ ಸರಿಪಡಿಸಲಾಗುವುದು ಎಂದು ಸದನದ ಮೂಲಕ ತಿಳಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಸಚಿವರು ಇಲ್ಲ, ಕೂತುಕೊಳ್ಳಿ ಸಚಿವರನ್ನು ಕರೆಸುತ್ತೇನೆ.

<u>ಯಾದಗಿರಿಯನ್ನು ಜಿಲ್ಲೆಯನ್ನಾಗಿ ಮಾಡುವುದು</u>

ಡಾ। ಎ.ಬಿ. ಮಲಕರೆಡ್ಡಿ (ಯಾದಗಿರಿ) : ಜಿಲ್ಲಾ ಪುನರ್‌ವಿಂಗಡಣಾ ಸಮಿತಿ ಶಿಫಾರಸಿನ ಮೇರೆಗೆ ಸರ್ಕಾರ ಒಂದು ವರ್ಷದ ಹಿಂದೆ ಏಳು ಜಿಲ್ಲೆಗಳನ್ನು ಘೋಷಣೆ ಮಾಡಿತು. ಆಗಸ್ಟ್ ತಿಂಗಳಿಂದ ಅವು ಅಸ್ತಿತ್ವಕ್ಕೆ ಬಂದುವು ಕೆಲವು ಹೊಸ ಜಿಲ್ಲೆಗಳು ಶಿಫಾರಸ್‌ನಲ್ಲಿಲ್ಲದಿದ್ದರೂ ಅಸ್ತಿತ್ವಕ್ಕೆ ಬಂದವು. ಗುಲ್ಬರ್ಗಾವನ್ನೂ ಯಾದಗೀರ್ ಕೇಂದ್ರ ಸ್ಥಳವನ್ನಾಗಿ ಮಾಡಿ ಜಿಲ್ಲೆ ಮಾಡಬೇಕೆಂದು ಶಿಫಾರಸ್‌ನಲ್ಲಿತ್ತು. ನಮಗೆ ಇನ್ನೂ ಅರ್ಥವಾಗುತ್ತಿಲ್ಲ. ಪ್ರತಿಪಕ್ಷದ ಧುರೀಣ ಶ್ರೀ ಮಲ್ಲಿಕಾರ್ಜುನ ಖರ್ಗೆಯವರೂ ಅನೇಕ ಸಾರಿ ಪ್ರಸ್ತಾಪ ಮಾಡಿದ್ದಾರೆ. ನಾನೂ ಪ್ರಸ್ತಾಪ ಮಾಡಿದ್ದೇನೆ. ಈಗ ಒಂದು ವರ್ಷ ಮುಗಿದುಹೋಯಿತು. ಯಾದಗಿರಿ ಎಲ್ಲಾ ಅಂಶಗಳನ್ನೂ ಫುಲ್‌ಫಿಲ್ ಮಾಡುತ್ತದೆ. ಎಲ್ಲಾ ಇಲಾಖೆಗಳ ಸಬ್ ಡಿವಿಜನ್ ಕೇಂದ್ರಕಛೇರಿಗಳಿವೆ, ಕೆಲವಂತೂ ಡಿವಿಜನಲ್ ಪೆಡ್‌ಕ್ವಾರ್ಟರ್ಸ್ 20 ವರ್ಷದಿಂದ ಇದೆ ಪಿಡಬ್ಲ್ಯೂಡಿ ಜೆಡ್‌ಪಿಕೆ ಇಬಿಗಳ ಡಿವಿಜನಲ್ ಹೆಡ್ ಕ್ವಾರ್ಟರ್ಸ್ ಇವೆ. ಮತ್ತು ಒಳ್ಳೆಯ ಹಿನ್ನೆಲೆ ಕೂಡ ಇದೆ. ನೀರಿನ ತೊಂದರೆ ಇಲ್ಲ. ಜನಸಂಖ್ಯೆ 2-3 ಲಕ್ಷವಾದರೂ ತೊಂದರೆ ಬರುವುದಿಲ್ಲ. ಏಕೆಂದರೆ ಯಾದಗಿರಿ ಭೀಮಾನದಿ ದಂಡೆ ಮೇಲೆ ಇದೆ. ಸರ್ಕಾರ 8-10 ಕೋಟಿ ಖರ್ಚುಮಾಡಿ ಜಲಪೂರೈಕೆ ಯೋಚನೆ ಪೂರೈಸಿದೆ. ರೈಲ್ವೆ ಲೈನ್ ಇದೆ, ರಾಜಧಾನಿ ಮತ್ತು ರಾಷ್ಟ್ರದ ರಾಜಧಾನಿಗೆ ಹೋಗಲು ರೈಲ್ವೆ ಲೈನ್ ಇದೆ. ಇಷ್ಟೆಲ್ಲಾ ಅನುಕೂಲಗಳಿದ್ದರೂ ಇದನ್ನು ಮಾಡಲು ಏಕೆ ವಿಳಂಬ ಮಾಡುತ್ತಿದ್ದೀರಿ; ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದರೆ ಇನ್ನೊಂದರೆರಡು ತಿಂಗಳಲ್ಲಿ ಮಾಡುವುದಾಗಿ ಹೇಳುತ್ತಾರೆ. ವಿಳಂಬವಾಗುತ್ತಿರುವುದಕ್ಕೆ ಕಾರಣವನ್ನು ಅರ್ಥವಾಗುತ್ತಿಲ್ಲ ಜನರಲ್ಲಿ ಕಳವಳ ಉಂಟಾಗಿದೆ. ಅವರು ಅಸಹಾಯಕರಾಗಿದ್ದಾರೆ. ಮತ್ತೆ ಗದ್ದಲವಾಗತಕ್ಕ ಪ್ರಸಂಗವಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ.ಸಿ ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 7 ಹೊಸ ಜಿಲ್ಲೆಗಳನ್ನು ಮಾಡಿರತಕ್ಕದನ್ನು ನೀವೆಲ್ಲಾ ಸ್ವಾಗತ ಮಾಡಿದಿರಿ. ಗುಲ್ಬರ್ಗಾ ಮತ್ತು ಬೆಳಗಾಂಗೆ ಸಂಬಂಧಪಟ್ಟಂತೆ ಮಾಡಲು ಆಗಲಿಲ್ಲ. Government is seized of the matter. The Government is aware of this and ultimately let there be a unanimous decision about Gulbarga also. I think Government is seized of the matter.... ಭಾವನಾತ್ಮಕವಾದ ವಿಚಾರವನ್ನು ಎತ್ತಿ ಅಲ್ಲಿ ಇಲ್ಲಿ ಗದ್ದಲದ ಪರಿಸ್ಥಿತಿ ನಿರ್ಮಾಣ ಮಾಡಬಾರದು ಎನ್ನತಕ್ಕ ಉದ್ದೇಶದಿಂದ, ಇದರ ಬಗ್ಗೆ ಸ್ವಲ್ಪಮಟ್ಟಿಗೆ ಯೋಚನೆ ಮಾಡಿ ತಿರ್ಮಾನ ತೆಗೆದು ಕೊಳ್ಳುತ್ತೇವೆ.